**OS 188/2025**

**PW-1:** ಎಂ.ಹೆಚ್. ರಾಮಾಂಜಿನೇಯ

ದಿನಾಂಕಃ **06.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರವಾಗಿ ಶ್ರೀ ಕೆ.ಸಿ.ಎಸ್. ವಕೀಲರಿಂದಃ**

1. ನಾವು 4 ಜನ ಸಹೋದರರು. ಆ ಪೈಕಿ ನಾನು ಹಿರಿಯವನು, 2 ನೇಯವರನು ಎಂ.ಹೆಚ್. ನಾಗಭೂಷಣ, 3 ನೇಯವರು ಮಲ್ಲಿಕಾರ್ಜುನ ಮತ್ತು 4 ನೇಯವರು ಅಲ್ಲಪುರಮಯ್ಯ. ದಾವಾ ಷೆಡ್ಯೂಲ್ ಸ.ನಂ. ಸ್ವತ್ತಿನಲ್ಲಿ ಮೊದಲಿಗೆ ಬೆಳೆಯುತ್ತಿದ್ದು ಈಗ ಬೀಡು ಇರುತ್ತದೆ. ಸುಮಾರು 10 ವರ್ಷಗಳಿಂದ ಸ್ವತು ಬೀಡು ಇದೆ. ದಾವಾ ಷೆಡ್ಯೂಲ್ ಸ.ನಂ. ಸ್ವತ್ತಿನಲ್ಲಿ ಸುಮಾರು 15 ಜನ ಭಾಗಸ್ತರಿದ್ದಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಉಳಿಕೆ ಭಾಗಸ್ತರೆಂದರೆ ಶಾಮರಾವ್, ಅಕ್ಕಮ್ಮ, ಸಿದ್ಧಯ್ಯ, ಹನುಮಂತಪ್ಪ, ಮಲ್ಲಿಕಾರ್ಜುನ, ಬಲರಾಮ ಸಿದ್ಧಪ್ಪ ರವರ ಮಕ್ಕಳು ರಾಮಕೃಷ್ಣ, ಲೋಕೇಶ್, ಪಾಪಣ್ಣ ರವರ ಮಕ್ಕಳು ಲಿಂಗಪ್ಪ ಮತ್ತು ಹನುಮಂತರಾಯಪ್ಪ ಮತ್ತು ಮಗಳು ನಾಗಭೂಷಣ, ಸಂಜೀವ್ ಕುಮಾರ್, ವಿಜಯ್ ಕುಮಾರ್, ಸೂರ್ಯನಾರಾಯಣ ಮತ್ತು ಇತರ ಭಾಗಸ್ತರ ಹೆಸರು ಹೇಳಲು ಆಗುವುದಿಲ್ಲ. ನಾನು ಈಗ ಹೇಳಿದ ಎಲ್ಲಾ ವ್ಯಕ್ತಿಗಳಿಗೂ ದಾವಾ ಸರ್ವೇ ನಂ. ಸ್ವತ್ತಿನಲ್ಲಿ ಭಾಗ ಇದೆ ಎಂದರೆ ಸರಿ. ನಮ್ಮ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಬೆಳೆ ಬೆಳೆಯಲು ನಮಗೆ ಯಾರು ಅಡ್ಡಿಪಡಿಸಿಲ್ಲ.

2. ನಾನು ದಾವಾ ಷೆಡ್ಯೂಲ್ ಆಸ್ತಿಯನ್ನು 25 ವರ್ಷಗಳ ಹಿಂದೆ ಖರೀದಿಸಿರುತ್ತೇನೆ. ನಾನು ಮತ್ತು ನನ್ನ 3 ಜನ ಅಣ್ಣ ತಮ್ಮಂದಿರು ಸೇರಿ ಖರೀದಿಸಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ಕೈಲಾಗದ ಕಾರಣ ಸ್ವತ್ತಿನಲ್ಲಿ ಬೆಳೆ ಇಟ್ಟಿಲ್ಲ. ದಾವಾ ಸ್ವತ್ತು ರಮೇಶ್ ಬಿನ್ ಲಂಕೇ ಹನುಮಯ್ಯ ರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಬೇರೆ ಸ್ವತ್ತನ್ನು ಮಾರಾಟ ಮಾಡಿದ್ದೇನೆ. ಈ ದಾವೆಯನ್ನು 2 ಎಕರೆ 20 ಗುಂಟೆ ಸ್ವತ್ತಿಗೆ ಸಲ್ಲಿಸಿದ್ದೇನೆ. ನಾನು ದಾವಾ ಸ್ವತ್ತು

ಎರಡುವರೆ ಎಕರೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಿ ಬಂದ ಹಣವನ್ನು ನಿಮ್ಮ ಸಹೋದರರಿಗೆ ನೀಡಿದ್ದೀರಿ ಎಂದರೆ ಸಾಕ್ಷಿಯು ಈ ಸ್ವತ್ತನ್ನು ಮಾರಾಟ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸ.ನಂ. 18/2 ಮತ್ತು 3 ರಲ್ಲಿ 7 ಎಕರೆ ಆಸ್ತಿಯನ್ನು ಮಾರಾಟ ಮಾಡಿದ್ದೇನೆ. ನಾನು ದಾವಾ ಸ್ವತ್ತಿನ 2 ಎಕರೆ 20 ಗುಂಟೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಕರಾರುಪತ್ರಕ್ಕೆ ನಾನು ನನ್ನ ಮಕ್ಕಳು ಮತ್ತು ಹೆಣ್ಣುಮಕ್ಕಳು ಸಹಿ ಮಾಡಿದ್ದೇವೆ ಎಂದರೆ ಸಾಕ್ಷಿಯು ನಾವು 7 ಎಕರೆ ಮಾರಾಟ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

3. ನನ್ನ ತಂದೆ ಮೃತಪಟ್ಟ ನಂತರ ಕುಟುಂಬದ ವ್ಯವಹಾರವನ್ನು ನಾನೇ ನಿರ್ವಹಿಸುತ್ತಿದ್ದೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಸಾಲ ಸೋಲ ಮತ್ತು ವ್ಯವಹಾರವನ್ನು ನಾನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಇದ್ದಾಗ ಸ.ನ. 18 ಅನ್ನು ಖರೀದಿಸಿದ್ದರು ಎಂದರೆ ಸರಿ. ಆಗ ಒಟ್ಟು ಕುಟುಂಬದಲ್ಲಿ ಎಷ್ಟು ಆದಾಯ ಬರುತ್ತಿತ್ತು ನನಗೆ ಗೊತ್ತಿಲ್ಲ ನನ್ನ ತಂದೆ ಎಲ್ಲವನ್ನು ಮಾಡುತ್ತಿದ್ದರು. ನಾನು ಮತ್ತು ನನ್ನ ಸಹೋದರರು ಪದ್ಮಾವತಿ ಮತ್ತು ಇತರರ ವಿರುದ್ಧ ಭಾಗಾಂಶ ಕೇಳಿ ಸ.ನಂ. 18/1 ಕ್ಕೆ ಓ.ಎಸ್. 52/2026 ರಂತೆ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಿನಾಂಕಃ 16.09.2025 ರಲ್ಲಿ ದಾವಾ ಸ್ವತ್ತಿನಲ್ಲಿ ನನಗೆ ಮತ್ತು ಅಣ್ಣ ತಮ್ಮಂದಿರಿಗೆ ಭಾಗ ಇದ್ದು ಬೇರೆ ಭಾಗಸ್ತರು ಇರುವುದರಿಂದ ನಿಧಾನವಾಗಿ ಹಂಚಿಕೆ ಮಾಡಿಕೊಳ್ಳುತ್ತೇವೆ ಎಂದು ಒಪ್ಪಿಗೆ ಪತ್ರ ಬರೆದಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕರಾರುಪತ್ರದಂತೆ ನನ್ನ ಅಣ್ಣ ತಮ್ಮಂದಿರಿಗೂ ದಾವಾ ಸ್ವತ್ತಿನಲ್ಲಿ ಭಾಗ ಇದೆ ಎಂದರೆ ಸರಿಯಲ್ಲ. ನಮ್ಮ ತಂದೆ ಮೃತಪಟ್ಟ ನಂತರ ನನ್ನ ಹೆಸರಿಗೆ ಪಹಣಿ ಆಗಿದ್ದು ನನ್ನ ಸಹೋದರರಿಗೆ ಮೋಸ ಮಾಡಲು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.